


ಎಂಬ ಸಣ್ಣ ಚಿನ್ನಾಭರಣದ ಅಂಗಡಿಯನ್ನು ತೆರೆದಿದ್ದಾನೆ. ಕನಿಷ್ಠವೆಂದರೂ ಅದರಿಂದ ದಿನಕ್ಕೆ ಎರಡು ಸಾವಿರಗಳಾದರೂ ಲಾಭ ಸಿಗುತ್ತಿದೆ. ಹೆಂಡತಿಯ ಮೊದಲ ಗಂಡನಿಗೆ ಹುಟ್ಟಿದ್ದ ಹೆಣ್ಣುಮಗುವನ್ನು ಸ್ವಂತ ಮಗಳಂತೆ ನೋಡಿಕೊಳ್ಳುತ್ತಿದ್ದಾನೆ. ಸೋನಾಳ ಮೊದಲ ಗಂಡನ ಹೆಸರಿನಲ್ಲಿ ಇಪ್ಪತ್ತು ಲಕ್ಷ ಠೇವಣಿ ಇಟ್ಟು ಕೋಲ್ಕತ್ತಾದಿಂದ ಎಂಬತ್ತು ಕಿಲೋಮೀಟರ್ ದೂರವಿರುವ ಅವರ ಊರಿನಲ್ಲೇ ಅವನ ಸಹೋದರರೊಂದಿಗೆ ಇರಿಸಿದ್ದಾನೆ. ಹೆಂಡತಿಯ ತಾಯಿಯನ್ನು ಸ್ವಂತ ಅತ್ತೆಯಂತೆ ನೋಡಿಕೊಳ್ಳುತ್ತಿದ್ದಾನೆ. ಮಧುಕೇಶ್ವರನೊಂದಿಗೆ ವಾರಕ್ಕೊಮ್ಮೆಯಾದರೂ ಒಂದೊಳ್ಳೆಯ ಪಾರ್ಟಿ ಮಾಡುತ್ತಾನೆ. ಅಪ್ಪನ ಫೋಟೊವನ್ನು ಚಿನ್ನದ ಕಟ್ಟಿನಲ್ಲಿ ಮಾಡಿಸಿ ದೇವರ ಮನೆಯಲ್ಲಿಟ್ಟು ಪ್ರತಿನಿತ್ಯ ಬೆಳಗ್ಗೆ, ಸಂಜೆ ಎರಡು ಸಾರಿ ಭಕ್ತಿಯಿಂದ ಪೂಜೆ ಮಾಡಿ ಸ್ಮರಿಸುತ್ತಾನೆ. ಸಂಸಾರದೊಂದಿಗೆ ಒಮ್ಮೆ ಗೋಕರ್ಣಕ್ಕೆ ಹೋಗಿ ಬರಬೇಕೆಂದು ಯೋಚಿಸುತ್ತಲೇ ಇದ್ದಾನೆ. ಆದರೆ, ಬಿಡುವಿಲ್ಲದೆ ಹೋಗಲು ಸಾಧ್ಯವಾಗಿಲ್ಲ. ಹಾಗೆಂದು ಅಲ್ಲಮಪ್ರಭುವಿಗೆ ಚಿಂತೆಯೂ ಇಲ್ಲ, ಬೇಸರವೂ ಇಲ್ಲ. ಸೋನಾಗಾಚಿಯಲ್ಲಿ ಮಧುಕೇಶ್ವರನನ್ನೂ ಒಳಗೊಂಡು ಸೋನಾಳ ಬಗ್ಗೆ ಹೇಳುವುದೇನೆಂದರೆ, "ಸೋನಾಗಾಚಿಯಲ್ಲಿ ಇಂಥ ಅಪರೂಪದ ವಿಚಿತ್ರ ಪ್ರಕರಣವನ್ನು ಇದುವರೆಗೂ ನೋಡಿಯೇ ಇಲ್ಲ, ಬಹುಶಃ ಮುಂದೆ ನೋಡುವುದೂ ಇಲ್ಲ..." ಎಂಬುದೇ ಆಗಿದೆ. ಆದರೆ, ಇಂಥ ಅಪರೂಪದ ಸಂಗತಿಗೆ ಕಾರಣನಾದವನು ಮಾತ್ರ ವಾನಳ್ಳಿಯ ಅಲ್ಲಮಪ್ರಭು. ಆದರೆ, ಇವೆಲ್ಲಕ್ಕೂ ಮೂಲ ಆಧಾರವಾಗಿದ್ದು ಮಾತ್ರ ತನ್ನ ಅಪ್ಪ, ಹೊನ್ನಾವರದ ಮೋಹನ್ ಕಿಣಿ ಮತ್ತು ಜಡ್ಡಿಗದ್ದೆಯ ಮಧುಕೇಶ್ವರ ಎಂಬ ಸತ್ಯವನ್ನು ಎದೆಗಿಳಿಸಿಕೊಂಡಿರುವ ಅಲ್ಲಮಪ್ರಭು ಈ ಮೂವರೇ ತನ್ನ ಪಿತೃಗಳೆಂದು ಎದೆಯಲ್ಲಿ ಧ್ಯಾನಿಸುತ್ತಾ ನೆಮ್ಮದಿಯಾಗಿದ್ದಾನೆ. ಅಲ್ಲದೆ, ಸೋನಾಗಾಚಿಯ ಒಂದು ಪ್ರಮುಖ ಎನ್‌ಜಿಓದ ಸದಸ್ಯನಾಗಿರುವ ಅಲ್ಲಮಪ್ರಭು ಹತ್ತು ವೇಶ್ಯೆಯರ ಅನಾಥ ಮಕ್ಕಳನ್ನು ದತ್ತು ಪಡೆದು ಪ್ರತಿವರ್ಷ ಎರಡು ಲಕ್ಷ ರೂಪಾಯಿಗಳನ್ನು ಅವರ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದಾನೆ. ಇನ್ನೂ ಅತಿ ಮುಖ್ಯವಾದ ಸಂಗತಿಯೆಂದರೆ ಅಲ್ಲಮಪ್ರಭು ಮತ್ತು ಸೋನಾಳಿಗೆ ಮುದ್ದಾದ ಎರಡು ವರ್ಷದ ಗಂಡು ಮಗುವಿದೆ. ಅದು ಥೇಟ್ ತನ್ನ ಅಪ್ಪನನ್ನೇ ಹೋಲುತ್ತಿರುವುದು ಅಲ್ಲಮಪ್ರಭುವಿನ ಬಾಳಿನಲ್ಲಿ ವಿಸ್ಮಯದ ಸಂಭ್ರಮದ ಕ್ಷಣಗಳನ್ನು ತುಂಬುತ್ತಿದೆ. ಅಪ್ಪ ಹೇಳಿದಂತೆ ಅಲ್ಲಮಪ್ರಭುವಿಗೆ ಹುಟ್ಟಿದ ಜಾಗ ಬಿಟ್ಟ ಮೇಲೆ ಶಾಪ ವಿಮೋಚನೆಯಾಗಿತ್ತು.


**ಕೇಶವರೆಡ್ಡಿ ಹಂದ್ರಾಳ**

ಕನ್ನಡ ಓದುಗರಿಗೆ ಕತೆಗಾರ, ಕಾದಂಬರಿಕಾರ ಕೇಶವರೆಡ್ಡಿ ಹಂದ್ರಾಳ ಅವರದು ಪರಿಚಿತ ಹೆಸರು. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'— ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. 'ಮೃಗತೃಷ್ಣೆ', 'ಲಂಟಾನಾ' ಮತ್ತು 'ಅಣು' ಅವರ ಕಾದಂಬರಿಗಳಾಗಿವೆ.